ರಾಗ - ಕಾಂಬೋಧಿ                ಆದಿತಾಳ



ಶ್ರೀ ಮಹಾಲಕ್ಷ್ಮೀಯು ಅಲಂಕರಿಸಿ ಕರೆತರು ।
ಶ್ರೀ ಮಹಾಲಕ್ಷ್ಮೀಯು — — — ॥ ಪ ॥

ಕೇಶವ ನಿಮ್ಮ ನಾಮ ಮಾಂಗಲ್ಯ ಸೂತ್ರ ತಾಳಿ ।
ನಾರಾಯಣ ನಿಮ್ಮ ನಾಮ ತಾಳಿ ಪದಕವು ।
ಮಾಧವ ನಿಮ್ಮ ನಾಮ ಸಾರಸ ಸಂಪಿಗೆ ಮೊಗ್ಗು ।
ಗೋವಿಂದ ನಿಮ್ಮ ನಾಮ ಗೋಧಿಯ ಸರವು ॥೧॥

ವಿಷ್ಣುವೆ ನಿಮ್ಮ ನಾಮ ರತ್ನ ಕುಂಡಲಗಳು ।
ಮಧುಸೂದನ ನಾಮ ಮೋಳೆ ಕ್ಯಾದಗರಗಳು ।
ತ್ರಿವಿಕ್ರಮ ನಿಮ್ಮ ನಾಮ ವಂಕಿ ನಾಗ ಮುರಿಗೆ ।
ವಾಮನ ನಿಮ್ಮ ನಾಮ ಓಲೆಯ ವರಾವಳಿ ॥೨॥

ಶ್ರೀಧರ ನಿಮ್ಮ ನಾಮ ಬಳೆ ಮುತ್ತಿನ ಹಾರ ।
ಹೃಷೀಕೇಶ ನಿಮ್ಮ ನಾಮ ಕಾಲಿಗೆ ಗೆಜ್ಜೆಯು ।
ಪದ್ಮನಾಭ ನಿಮ್ಮ ನಾಮ ಮುತ್ತಿನ ಅಡ್ಡಿಕೆಯು ।
ದಾಮೋದರ ನಿಮ್ಮ ನಾಮ ರತ್ನ ಪದಕವು ॥೩॥



ಸಂಕರ್ಷಣ ನಿಮ್ಮ ನಾಮ ವಂಕಿ ತೋಳಾಯಿತು ।
ವಾಸುದೇವ ನಿಮ್ಮ ನಾಮ ಪಲುಡ ಬು- - - ರು ।
ಪ್ರದ್ಯುಮ್ನ ನಿಮ್ಮ ನಾಮ ಹಸ್ತ ಕಂಕಣ ಬಳೆ ।
ಅನಿರುದ್ಧ ನಿಮ್ಮ ನಾಮ ಬಂಗಾರ ಬುಲಾಕು ॥೪॥

ಪುರುಷೋತ್ತಮ ನಿಮ್ಮ ನಾಮ ಹೊಸ ಮುತ್ತಿನ ಮೂಗುತಿ।
ಅಧೋಕ್ಷಜ ನಿಮ್ಮ ನಾಮ ಚಂದ್ರ ಸೂರ್ಯರು।
ನರಸಿಂಹ ನಿಮ್ಮ ನಾಮ ಚೌರಿ ರಾಗಟೆ ಗೊಂಡ್ಯ।
ಅಚ್ಯುತ ನಿಮ್ಮ ನಾಮ ಮುತ್ತಿನ ಬೊಟ್ಟು ॥ ೫ ॥

ಜನಾರ್ದನ ನಿಮ್ಮ ನಾಮ ಜರಿಯ ಪೀತಾಂಬರ।
ಉಪೇಂದ್ರ ನಿಮ್ಮ ನಾಮ ಕಡದ ನಡ್ಡೊಟು।
ಶ್ರೀಹರಿ ನಿಮ್ಮ ನಾಮ ಕಾಂಚು ಪಂಕ್ತಿಯ ತುಳಸಿ।
ಶ್ರೀಕೃಷ್ಣ ನಿಮ್ಮ ನಾಮ ನಡುವಿನ ವಡ್ಯಾಣವು ॥ ೬ ॥

ಸರಸಿಜಾಕ್ಷ ನಿಮ್ಮ ನಾಮ ಅರಶಿನ ಪಿಣ್ಣೆಹಚ್ಚೆ।
ಪಂಕಜಾಕ್ಷ ನಿಮ್ಮ ನಾಮ ಕುಂಕುಮ ಕಾಡಿಗೆಯು।
ಪುರಂದರ ವಿಠಲ ನಿಮ್ಮ ನಾಮ ಸರ್ವ ಆಭರಣವು।
ನಿಲುವು ಕನ್ನಡಿಯಲ್ಲಿ ಒಲಿದು ನೋಡಿಕೊಳುತ ॥ ೭ ॥

— ‡ —